# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ -145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್-145 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ಆರ್. ಉಪ ಆಯುಕ್ತರು ಕಂದಾಯ (ದಕ್ಷಿಣ), ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ದಿನಾಂಕ:05/02/2022ರ ಶನಿವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:-**

1. ಉಪ ಆಯುಕ್ತರು (ದಕ್ಷಿಣ) ಹಾಗೂ ವಾರ್ಡ್ 145ರ ನೋಡಲ್ ಅಧಿಕಾರಿ.
2. ಸಹಾಯಕ ಅಭಿಯಂತರರು ವಾರ್ಡ್-145
3. ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-145.
4. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-145.
5. ನಾಗರೀಕ ಕಲ್ಯಾಣ ಸಂಘದ ಸದಸ್ಯರು ಮತ್ತು ಸಾರ್ವಜನಿಕರು.
6. ಕಿರಿಯ ಇಂಜಿನಿಯರ್ (ವಿದ್ಯುತ್ ವಿಭಾಗ ಬಿಬಿಎಂಪಿ)

**ಸಭೆಗೆ ಗೈರು ಹಾಜರಾದ ಇಲಾಖೆಗಳು:-**

1. ಸಹಾಯಕ ಇಂಜಿನಿಯರ್ (BWSSB)
2. ಪೋಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.
3. ವಿಲ್ಸನ್‌ಗಾರ್ಡನ್ ಪೋಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 145.
4. ವಿಲ್ಸನ್‌ಗಾರ್ಡನ್ ಪೋಲೀಸ್ ಠಾಣೆ ಸಂಚಾರ ವಾರ್ಡ್ 145.
5. ತೋಟಗಾರಿಕೆ ಇಲಾಖೆ, ಬಿಬಿಎಂಪಿ ಅಧಿಕಾರಿಗಳು ವಾರ್ಡ್ 145.
6. ಸಹಾಯಕ ಇಂಜಿನಿಯರ್ (ಬೆಸ್ಕಾಂ)

*********

1. ವಾರ್ಡ್ ವ್ಯಾಪ್ತಿಯಲ್ಲಿನ ಹೂವಿನ ಅಂಗಡಿಗಳಿಂದ ಸ್ಥಳೀಯ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ನಾಗರೀಕರು ಸಭೆಯಲ್ಲಿ ಚರ್ಚಿಸಿದರು, ಮನೆಗಳಲ್ಲಿ ಹೂವಿನ ಅಂಗಡಿಗಳನ್ನು ನಡೆಸುತ್ತಿದ್ದು, ಸದರಿ ಮನೆಗಳಿಂದ ಅಂಗಡಿಗಳನ್ನು ತೆರವುಗೊಳಿಸಲು ಕೋರಿದರು- ಆರೋಗ್ಯ ಇಲಾಖೆಯಿಂದ ಹಿರಿಯ ಆರೋಗ್ಯ ಪರಿವೀಕ್ಷಕರು ಚರ್ಚಿಸಿದರು ಸದರಿ ವಿಷಯದ ಬಗ್ಗೆ ಹೂವಿನ ಅಂಗಡಿಗಳನ್ನು ಹೆಬ್ಬಾಳದಲ್ಲಿ 7 ಎಕರೆ ಜಮೀನನ್ನು ಘನ ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

Scanned with CamScanner

2. ಸದರಿ ವಿಷಯದ ಬಗ್ಗೆ ವಿಲ್ಸನ್‌ಗಾರ್ಡನ್ ವೆಲ್‌ಫೇರ್ ಅಸೋಸಿಯೇಷನ್ ರವರು ಈಗಾಗಲೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ, ಹೂವಿನ ಅಂಗಡಿಗಳ ಅಸೋಸಿಯೇಷನ್ ರವರು ಕೂಡ ಸದರಿ ದಾವೆಯಲ್ಲಿ ಸೇರಿರುತ್ತಾರೆ. ಸಂಬಂಧಿಸಿದಂತೆ ಬಿಬಿಎಂಪಿ ವತಿಯಿಂದ ಆರೋಗ್ಯ ವೈದ್ಯಾಧಿಕಾರಿಗಳು, ಚಿಕ್ಕಪೇಟೆ ರವರು ನ್ಯಾಯಾಲಯಕ್ಕೆ ಕಂಡಿಕೆವಾರು ಉತ್ತರವನ್ನು ಸಲ್ಲಿಸಿರುತ್ತಾರೆ.

3. ವಿಲ್ಸನ್‌ಗಾರ್ಡನ್ ವ್ಯಾಪ್ತಿಯಲ್ಲಿ ಅನೇಕ ಹೂವಿನ ಅಂಗಡಿಗಳಿದ್ದು, ಬೇರೆ ಕಡೆಯಿಂದ ಬಂದು ಕಾರ್ಯನಿರ್ವಹಿಸುವ ಕಾರ್ಮಿಕರು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದು, ಸ್ಥಳೀಯರು ಪ್ರಶ್ನಿಸಿದರೆ ಬೆದರಿಕೆ ಒಡ್ಡುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವಿಷಯದ ಬಗ್ಗೆ ಆರೋಗ್ಯಾಧಿಕಾರಿಗಳು (ದಕ್ಷಿಣ) ಮತ್ತು ಆರೋಗ್ಯ ವೈದ್ಯಾಧಿಕಾರಿಗಳು, ಚಿಕ್ಕಪೇಟೆ ರವರೊಂದಿಗೆ ಜಂಟಿ ಆಯುಕ್ತರು (ದಕ್ಷಿಣ) ರವರ ಅಧ್ಯಕ್ಷತೆಯೊಂದಿಗೆ ಸಭೆ ನಡೆಸುವುದುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.

4. ಮತದಾರರ ಪಟ್ಟಿಯಲ್ಲಿ ಇರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ಸಂಬಂಧಿಸಿದಂತೆ ಯಾವುದಾದರೂ ನ್ಯೂನ್ಯತೆಗಳಿದ್ದರೆ ಕಂದಾಯ ವಿಭಾಗದಲ್ಲಿ ಖುದ್ದಾಗಿ ಭೇಟಿ ಮಾಡಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿರುತ್ತದೆ ಎಂದು ಕಂದಾಯ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

5. ಹರಿಲಕ್ಷ್ಮಿ ಥಿಯೇಟರ್ ಪಕ್ಕದಲ್ಲಿ ಆಟೋ ಟಿಪ್ಪರ್ ಅಥವಾ ಕಾಂಪ್ಯಾಕ್ಟರ್‌ನ್ನು ನಿಲುಗಡೆ ಮಾಡದೇ ಇರಲು ಕೋರಿದರು – ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಘನತ್ಯಾಜ್ಯವನ್ನು ಸಂಗ್ರಹಿಸಿದ ನಂತರ ಸದರಿ ಜಾಗದಲ್ಲಿ ಆಟೋ ಟಿಪ್ಪರ್ ಅಥವಾ ಕಾಂಪ್ಯಾಕ್ಟರ್‌ನ್ನು ನಿಲುಗಡೆ ಮಾಡುವುದಿಲ್ಲವೆಂದು ಸಭೆಗೆ ತಿಳಿಸಿದರು.

6. ವಿಲ್ಸನ್‌ಗಾರ್ಡನ್ 9ನೇ ಅಡ್ಡರಸ್ತೆಗೆ ಸಂಪೂರ್ಣವಾಗಿ ಡಾಂಬರೀಕರಣ ಮಾಡಿಲ್ಲವೆಂದು ಸಭೆಯಲ್ಲಿ ತಿಳಿಸಿದರು – ಸಹಾಯಕ ಅಭಿಯಂತರರು ಮಾತನಾಡಿ 2–3 ದಿನದಲ್ಲಿ ಸದರಿ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿದರು.

7. ವಿಲ್ಸನ್‌ಗಾರ್ಡನ್ 8ನೇ ಅಡ್ಡರಸ್ತೆ ಹಾಗೂ ಬಿ.ಟಿ.ಎಸ್ ರಸ್ತೆ ತಿರುವಿನಲ್ಲಿರುವ ಕಟ್ಟಡದಲ್ಲಿ ನಗರದ ATM ಗಳಿಗೆ ಹಣ ರವಾನಿಸಲು ಇರುವ ಕಂಪನಿಯ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿದ್ದು, ಸ್ಥಳೀಯ ನಾಗರೀಕರ ವಾಹನಗಳಿಗೆ ಹಾಗೂ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ತುಂಬಾ ತೊಂದರೆಯಾಗಿರುತ್ತದೆ ಎಂದು ಸ್ಥಳೀಯರು ದೂರಿದರು

Scanned with CamScanner

– ಅಧ್ಯಕ್ಷರು ಮಾತನಾಡಿ ಸದರಿ ಸಭೆಗೆ ಪೋಲೀಸ್ ಇಲಾಖೆಯಿಂದ ಯಾವುದೇ ಅಧಿಕಾರಿಗಳು ಆಗಮಿಸದೇ ಇರುವ ಕಾರಣ ಸದರಿ ವಿಷಯವನ್ನು ಸಂಚಾರಿ ಪೋಲೀಸ್ ವಿಭಾಗ ರವರ ಗಮನಕ್ಕೆ ತರಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

8. ವಿಲ್ಸನ್‌ಗಾರ್ಡನ್ 8ನೇ ಅಡ್ಡರಸ್ತೆಯಲ್ಲಿ ಒಂದು ಖಾಲಿ ನಿವೇಶನವಿದ್ದು, ಸದರಿ ನಿವೇಶನದಲ್ಲಿ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದು, ಇದರಿಂದ ಸ್ಥಳೀಯ ನಾಗರೀಕರಿಗೆ ತೊಂದರೆಯಾಗುತ್ತಿದೆ ಎಂದು ಶ್ರೀ. ನಾಗೇಶ್ ರವರು ಮಾತನಾಡಿದರು.

9. ವಿಲ್ಸನ್‌ಗಾರ್ಡನ್ ವ್ಯಾಪ್ತಿಯ ಆನೆ ಪಾರ್ಕ್‌ನಲ್ಲಿ ನಿರ್ವಹಣೆ ಸಮರ್ಪಕವಾಗಿಲ್ಲವೆಂದು ಸ್ಥಳೀಯರು ದೂರಿದರು – ಸದರಿ ಪಾರ್ಕ್‌ನ ಅಭಿವೃದ್ಧಿ ಕಾಮಗಾರಿಯು ಸಧ್ಯದಲ್ಲೇ ಪ್ರಾರಂಭವಾಗಲಿದ್ದು, ಕ್ರಮ ವಹಿಸಲಾಗುವುದೆಂದು ವಾರ್ಡಿನ ಅಭಿಯಂತರರು ಸಭೆಗೆ ತಿಳಿಸಿದರು.

10. ವಿಲ್ಸನ್‌ಗಾರ್ಡನ್ ಹೆರಿಗೆ ಆಸ್ಪತ್ರೆಯಲ್ಲಿ ಜನನ ಪ್ರಮಾಣ ಪತ್ರವನ್ನು ಸರಿಯಾಗಿ ವಿತರಿಸುತ್ತಿಲ್ಲವೆಂದು ದೂರಿದರು – ಸಂಬಂಧಿಸಿದ ವಿಷಯದ ಬಗ್ಗೆ ಕ್ರಮ ವಹಿಸಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

11. ವಿಲ್ಸನ್‌ಗಾರ್ಡನ್ 8 ಮತ್ತು 9ನೇ ಅಡ್ಡರಸ್ತೆಯಲ್ಲಿ ಹಾಗೂ ರಾಣಿಪಾರ್ಕ್‌ನಲ್ಲಿ ಬೀದಿ ದೀಪಗಳು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲವೆಂದು ದೂರಿದರು – ಸದರಿ ವಿಷಯದ ಬಗ್ಗೆ ಕಿರಿಯ ಅಭಿಯಂತರರು, ವಿದ್ಯುತ್ ಬಿಬಿಎಂಪಿ ರವರು ಮಾತನಾಡಿ ಸರಿಪಡಿಸಲಾಗುವುದೆಂದು ಸಭೆಗೆ ತಿಳಿಸಿದರು.

12. ವಿಲ್ಸನ್‌ಗಾರ್ಡನ್ ಪ್ರದೇಶದಲ್ಲಿ 4 ದಿನಗಳಿಂದ ಕುಡಿಯುವ ನೀರನ್ನು ಒದಗಿಸಿಲ್ಲವೆಂದು ಶ್ರೀ.ಸುನಿಲ್ ರವರು ಸಭೆಯಲ್ಲಿ ದೂರಿದರು – ಸದರಿ ವಿಷಯವನ್ನು ಬೆಂಗಳೂರು ನೀರು ಸರಬರಾಜು ವಿಭಾಗಕ್ಕೆ ಸರಿಯಾಗಿ ನೀರನ್ನು ಒದಗಿಸಲು ಕೋರಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

13. ವಿಲ್ಸನ್‌ಗಾರ್ಡನ್ ವ್ಯಾಪ್ತಿಯ ರಾಣಿಪಾರ್ಕ್‌ನಲ್ಲಿ ದಿನಬಿಟ್ಟು ದಿನ ಫಾಗಿಂಗ್ ಕೆಲಸ ನಿರ್ವಹಿಸಲು ಸ್ಥಳೀಯರು ಕೋರಿದರು – ಕಿರಿಯ ಆರೋಗ್ಯ ಪರಿವೀಕ್ಷಕರು ಫಾಗಿಂಗ್ ಕೆಲಸ ನಿರ್ವಹಿಸುವುದಾಗಿ ಒಪ್ಪಿಗೆ ನೀಡಿದರು.



Scanned with CamScanner

14. ವಿಲ್ಸನ್‌ಗಾರ್ಡನ್ 10ನೇ ಅಡ್ಡರಸ್ತೆಯಲ್ಲಿ ಇರುವ ಶ್ರೀ. ರಾಮಮಂದಿರ ಮುಂಭಾಗದಲ್ಲಿ Towing Zone ಬೋರ್ಡನ್ನು ಅಳವಡಿಸಲು ಕೋರಿದರು – ಅಧ್ಯಕ್ಷರು ಮಾತನಾಡಿ ಸದರಿ ವಿಷಯವು ಸಂಚಾರಿ ಪೋಲೀಸ್ ಠಾಣೆ ವ್ಯಾಪ್ತಿಗೆ ಒಳಪಟ್ಟಿದ್ದು, ಚರ್ಚಿಸಲಾಗುವುದೆಂದು ಸಭೆಗೆ ತಿಳಿಸಿದರು.

15. ವಿಲ್ಸನ್‌ಗಾರ್ಡನ್ 11ನೇ ಅಡ್ಡರಸ್ತೆಯಲ್ಲಿ Milky Mist ಫ್ಯಾಕ್ಟರಿ ಇದ್ದು, ದಿನದ 24 ಗಂಟೆಯೂ Refrigerator ಶಬ್ಧ ಇರುವುದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿದೆ ಎಂದು ಸಭೆಗೆ ತಿಳಿಸಿದರು – ಸದರಿ ವಿಷಯದ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ ಕ್ರಮ ಕೈಗೊಳ್ಳಲು ಅಧ್ಯಕ್ಷರು ತಿಳಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಪಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner